ಶ್ರೀ ಜಿ. ರಾಮೇಗೌಡ.—ಬಜೆಟನಲ್ಲಿ ೨೯ ಪರ್‌ಸೆಂಟ್ ಖೋತಾ ಮಾಡುವಾಗ ನೀವು ಯಾವ ಯಾವ ಕಾರಣಗಳನ್ನು ಅನುಸರಿಸಿಕೊಂಡು ಖೋತಾ ಮಾಡುತ್ತೀರಿ ? ಇದು ಸರ್ವೇ ಸಾಮಾನ್ಯವಾಗಿ ಎಲ್ಲಾ ತಾಲ್ಲೂಕ್‌ಗಳಿಗೆ ಖೋತಾ ಮಾಡಿದಿರಾ ? ಡಿಸ್ಟ್ರಿಕ್ಟ್ ವಾರ್ ಖೋತಾ ಮಾಡಿದ್ದೀರಾ, ಇಲ್ಲ ತಮಗೆ ಇಷ್ಟವಿಲ್ಲದ ಕಡೆ ಖೋತಾ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊನೆಯದಂತೂ ಸರಿಯಲ್ಲ, ಇದು ಇಷ್ಟವಿಲ್ಲದ ಕಡೆ ಖೋತಾ ಮಾಡುವ ಪ್ರಶ್ನೆಯಲ್ಲ ಜಿಲ್ಲಾವಾರು, ಡಿವಿಜನ್‌ವಾರ್ ಹಂಚಿದ್ದೇವೆ, ಎಲ್ಲರಿಗೂ ೨೯ ಪರ್‌ಸೆಂಟ್ ಖೋತಾ ಮಾಡಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಜನಸಂಖ್ಯೆಯ ಅವಶ್ಯಕತೆಯ ಆಧಾರದ ಮೇಲೆ ಹಣವನ್ನು ಅಲಾಟ್ ಮಾಡುತ್ತೇವೆಂದು ಹೇಳಿದಿರಿ. ಶಿವಮೊಗ್ಗ ಸರ್ಕಲ್‌ನಲ್ಲಿ ೪ ಜಿಲ್ಲೆಗಳು ಇವೆ. ಜನಸಂಖ್ಯೆ ಇ?, ಅವಶ್ಯಕತೆ ಇದೆ, ಇವೆಲ್ಲಾ ಇದ್ದರೂ ಕೂಡ ಬೇರೆ ಸರ್ಕಲ್‌ಗೆ ಒದಗಿಸತಕ್ಕಂಥ ಹಣ ಹೋಲಿಸಿ ನೋಡಿದರೆ ಕಡಿಮೆಯಾಗಿ ಬಿಟ್ಟು ಅವಶ್ಯಕ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ನಿಮ್ಮ ಇಂಜಿನಿಯರ್‌ಗಳು ಕೈ ಕಟ್ಟಿಕೊಂಡು ಕೂತುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಣವನ್ನು ಒದಗಿಸಿ ಆಷ್ಟು ಬೇಗ ಕೆಲಸ ಮಾಡಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜನಸಂಖ್ಯೆ ಅವಶ್ಯಕತೆ ಇದಾರದ ಮೇಲೆ ಎಲ್ಲಾ ಅಂಕಿ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು, ಸ್ಟೀಲ್ ಓವರ್ ಏನು ಇವೆ, ಯಾವ ಕೆಲಸಗಳು ಅರ್ಥಾಂಕಿತವಾಗಿ ಬಾಕಿವೆ ಅವಶ್ಯ ಪೂರೈಸಬೇಕ ದರೆ ಎಷ್ಟು ಹಣ ಬೇಕು, ಇವುಗೆಳೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಲಿಸ್ಟ್ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಡಿಮಿ ಹಣ ಇಟ್ಟಿರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶಿವಮೊಗ್ಗ ಸರ್ಕಲ್ ಏನೆಯದೋ ಅಥವಾ ಏನೆಯದೋ ಬರುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಯಾವ ಯಾವ ಅಂಶಗಳ ಮೇಲೆ ಹೇಳುತ್ತಿದ್ದೀರಿ ? ಶಿವಮೊಗ್ಗ ಸರ್ಕಲ್‌ನಲ್ಲಿ ಮಲೆನಾಡು ಹೆಚ್ಚಾಗಿ ಇದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೇತುವೆಗಳು ಬೇಕಾಗಿರುವುದರಿಂದ ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದಂಥ ಕಾಮಗಾರಿಗಳಿಗೆ ಎಸ್ಟಿಮೇಟ್ ಆಗಿ ಶುರು ಮಾಡದೇ ಇದ್ದಂಥ ಕೆಲಸಗಳನ್ನು ಈ ವರ್ಷ ಜಾಗ್ರತೆಯಾಗಿ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಪ್ರಾರಂಭ ಮಾಡಿರತಕ್ಕ ಕೆಲಸ ಮುಂದುವರಿಸಿ ಪೂರೈಸೋಣವೇ ? ಇಲ್ಲ ಹೊಸದನ್ನು ಪ್ರಾರಂಭ ಮಾಡೋಣವೇ ಎನ್ನುವ ತಾರತಮ್ಯವನ್ನು ವಿಚಾರ ಮಾಡಬೇಕಾಗಿರುತ್ತದೆ ಹಣವನ್ನು ಖೋತಾ ಮಾಡುವಾಗ ಈಗಾಗಲೇ ಅರ್ಥಾಂಕಿತವಾಗಿದೆ ಅಥವಾ ಮುಂಕ್ಯಾಲು ಕೆಲಸ ಆಗಿರತಕ್ಕ ಕೆಲಸಗಳನ್ನು ಪೂರೈಕೆ ಮಾಡುವುದಕ್ಕೆ ಹಣವನ್ನು ಒದಗಿಸುವುದಕ್ಕೆ ಆದ್ಯತೆ ಕೊಡುವುದು ನ್ಯಾಯ ಮತ್ತು ಅದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಒಂದುವೇಳೆ ಯಾವುದಾದರೂ ಹೊಸ ಕೆಲಸ ಪ್ರಾರಂಭ ಮಾಡಬೇಕಾದ ಪಕ್ಷದಲ್ಲಿ ಹಣದ ಪರಿಸ್ಥಿತಿಯನ್ನು ನೋಡಿ ಕೊಂಡು ಪ್ರಾರಂಭ ಮಾಡುವುದಕ್ಕೆ ೨-ನೇ ಪ್ರಾಧಾನ್ಯತೆ ಕೊಡುವುದು ನ್ಯಾಯ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು.

TANK WORKS TAKEN UP IN KANAKAPURA

45. **Sri S. Kariappa (Kanakapura).**—

Will the Minister for Public Works and Electricity be pleased to state :—

(*a*) when the tank works namely.—

(i) Chickondanahalli (ii) Keralasannara
(iii) Boobally (iv) Harihara

(SRI S. KARIYAPPA)

(v) Byalalu and (vi) Guruchihalla tank in Kanakapura were sanctioned ;

(*b*) the amount so for spent on each of these works ;

(*c*) the stage at which the work of each tank stands at present ;

(*d*) the steps the Government propose to take to complete the work in each of these cases ?

Sri H. M. Channabasappa (Minister for Public Works and Electricity).—

(*a*) (i) 4-1-1962 (ii) 30-3-1963
(iii) 24-9-1968 (iv) 1-12-1968
(v) 18-4-1963 (vi) 1-12-1968

(*b*) (i) Rs. 9,85,438-00 (ii) Rs. 1,63,209-00
(iii) Rs. 1,8 ,622-00 (iv) Rs. 93,770-00
(v) Rs. 1,04,153-00 (vi) 2,32,206-00

(*c*) (i) The balance work has to be taken up after fixing up of an agency.

(ii) Earth work to bund, waste weir raft clearing is in progr ss.

(iii) Bund work completed. Channel work is in progress.

(iv) The balance work has to be taken up after fixing up of an agency.

(v) Work physically completed except the channel portion at the tail end.

(vi) The balance work has to be taken up after fixing up of an agency.

(*d*) (i) Negotiations are being conducted with the tendered contractor to reduce the rates.

(ii) Work is in progress (iii) Work is in progress

(iv) Negotiations are being conducted with the tendered contractor to reduce the rates.

(v) The balance work is in progress.

(vi) Question of acceptance of the negotiated tender of Sri H. N. Ugregowda, contractor, is under consideration of Government.

ಶ್ರೀ ಎಸ್. ಕರಿಯಪ್ಪ.—ಉತ್ತರ ಸಮರ್ಪಕವಾಗಿದೆ. ಆದುದರಿಂದ ಉಪ ಪ್ರಶ್ನೆ ಏನೂ ಇಲ್ಲ.

WATER SUPPLY FROM IRRIGATION TANKS

50. Sri B. G. Banakar (Hirekerur).—

Will the Minister for Public Works and Eletricity be pleased to state ;—